ಡಿಡಬ್ಲೂಃ 1 ಅಸಲು ದಾವೆ ನಂ.477/2021

**ದಿನಾಂಕ 13-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರಿಂದಃ-**

1. ನಿಮ್ಮ ಮುಖಾಂತರ ನಿಶಾನೆಗೊಂಡ ದಾಖಲೆಗಳು ಇತ್ತೀಚಿನ ದಾಖಲೆಗಳಲ್ಲ ಎಂದರೆ ಸಾಕ್ಷಿಯು 1992 ರ ದಾಖಲೆಗಳನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ನಿಡಿ-1 ರ ನಂತರದಲ್ಲಿ ತಾಲ್ಲೂಕು ಪಂಚಾಯಿತಿಯರು ಬೇರೆ ಹಕ್ಕು ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿ.17-03-2018 ರಂದು 151 ಹೊಸ ಹಕ್ಕುಪತ್ರಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ನಿಡಿ-1 ರ ಚೆಕ್ ಬಂದಿಯನ್ನು ಹೇಳುತ್ತೇನೆ, ಪೂರ್ವಕ್ಕೆ ಹುಸೇನಪ್ಪ-ಪ್ಲಾಟ್ ನಂ.53, ಪಶ್ಚಿಮಕ್ಕೆ ಹಳ್ಳಪ್ಪ-ಪ್ಲಾಟ್ ನಂ.55, ಉತ್ತರಕ್ಕೆ & ದಕ್ಷಿಣಕ್ಕೆ ರಸ್ತೆಗಳು. ನೀವು ಹೇಳುತ್ತಿರುವ ಚೆಕ್ ಬಂದಿ ತಪ್ಪಿದೆ ಎಂದರೆ ಸರಿಯಲ್ಲ.

3. 2018 ರಲ್ಲಿ ಕರ್ನಾಟಕ ಸರ್ಕಾರದವರು 13 ಎಕರೆ ಜಾಗದಲ್ಲಿ ಒಟ್ಟು 151 ಪ್ಲಾಟುಗಳನ್ನಾಗಿ ಮಾಡಿ ಹಕ್ಕುಪತ್ರಗಳನ್ನು ಕೊಟ್ಟಿದ್ದರು, ಅದರಲ್ಲಿ ಪ್ಲಾಟ್ ನಂ.54 ಕರುಣಾ ಎಂಬುವವರಿಗೆ ಅಲಾಟ್ ಆಗಿತ್ತು ಎಂದರೆ ಸರಿಯಲ್ಲ. ಅದರ ಚೆಕ್ ನಂಬರ್ ಪೂರ್ವಕ್ಕೆ ಪ್ಲಾಟ್ ನಂ.55, ಪಶ್ಚಿಮಕ್ಕೆ ಪ್ಲಾಟ್ ನಂ.53, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಪ್ಲಾಟ್ ನಂ.35, ಅದರ ಉದ್ದ ಅಗಲ 40 X 30 ಎಂದರೆ ಸರಿಯಲ್ಲ.

4. ನಿಮ್ಮ ಮು. ವಿ. ಪ್ರ.ಪತ್ರದ 1 ನೇ ಪುಟದಲ್ಲಿ ಬರೆದಿರುವಂತೆ ಅಂಬೇಡ್ಕರ್ ಯೋಜನೆ ಅಡಿಯಲ್ಲಿ ನೀವು ಫಲಾನುಭವಿಯಾಗಿ ಆಯ್ಕೆ ಆಗಿದ್ದರೆ ಅದಕ್ಕೆ ಫಲಾನುಭವಿಗಳ ಆಯ್ಕೆಯ ದಾಖಲಾತಿ ಇರುತ್ತದೆ, ಅದನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ ಎನ್ನುತ್ತಾರೆ.

5. ಸದರಿ ಯೋಜನೆಯಲ್ಲಿ ನನ್ನೊಂದಿಗೆ 8 ರಿಂದ 10 ಜನ ಫಲಾನುಭವಿಗಳು ಆಯ್ಕೆ ಆಗಿದ್ದರು. ಆ ರೀತಿ ನೀವು ಆಯ್ಕೆ ಆಗಿದ್ದರೆ ಪಂಚಾಯಿತಿ ಕಡೆಯಿಂದ ನಿಮ್ಮ ಹೆಸರಿನಲ್ಲಿ ಹಣ ಬಿಡುಗಡೆ ಆಗುತ್ತದೆ ಎಂದರೆ ಸರಿ. ನಿಮಗೂ ಸಹ ಅದೇ ರೀತಿಯಾಗಿ ಹಣ ಬಿಡುಗಡೆ ಆಗಿರುತ್ತದೆ ಎಂದರೆ ಸರಿ. ನನ್ನ ಹೆಸರಿಗೆ 3 ಹಂತಗಳಲ್ಲಿ ಹಣ ಬಿಡುಗಡೆ ಆಗಿರುತ್ತದೆ. ಮೊದಲನೇ ಹಂತದಲ್ಲಿ ಎಷ್ಟು ಹಣ ಬಿಡುಗಡೆ ಆಗಿತ್ತು ಎಂದರೆ ಸಾಕ್ಷಿಯು ಮೊದಲು ಸರ್ಕಾರದವರೇ ಮನೆ ಕಟ್ಟಿಕೊಡುತ್ತಿದ್ದರು ಎನ್ನುತ್ತಾರೆ. ಆ ವಿಚಾರವಾಗಿ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನೀವು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

6. ನೀವು ಈಗಿರುವ ಫಲಾನುಭವಿಯನ್ನು ಆಸ್ತಿಯ ಸ್ವಾಧೀನದಿಂದ ಬಿಡಿಸಲು ಈ ರೀತಿ ಹಳೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಕಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2 ಹಂತದಲ್ಲಿ ಸರ್ಕಾದವರು ಫಲಾನುಭವಿಗಳ ಪಟ್ಟಿಯನ್ನು ಬಿಡುಗಡೆ ಮಾಡಿತ್ತು ಎಂದರೆ ಸರಿಯಲ್ಲ. ಪ್ಲಾಟ್ ನಂ.54 ನ್ನು ಸರ್ಕಾರದವರು ಈಗಾಗಲೇ ಬೇರೆಯವರಿಗೆ ಅಲಾಟ್ ಮಾಡಿದ್ದು, ಸದರಿ ಪ್ಲಾಟನ್ನು ಕಬಳಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ.

7. ಪ್ಲಾಟ್ ನಂ.54 ರ ದಕ್ಷಿಣಕ್ಕೆ ಪ್ಲಾಟ್ ನಂ.35 ಇದ್ದು, ಸದರಿ ಪ್ಲಾಟನ್ನೂ ಸಹ ಕಬಳಿಸುವ ಉದ್ದೇಶದಿಂದ ತಪ್ಪು ಮಾಹಿತಿ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

8. ದಾಖಲೆಗಳನ್ನು ಸೃಷ್ಟಿಸಿದ್ದಾರೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

9. ವಾದಿಯು ಪ್ಲಾಟ್ ನಂ.148 ಕ್ಕೆ ಸಂಬಂಧಿಸಿದಂತೆ ಈ ಕೇಸನ್ನು ಹಾಕಿದ್ದು, ಅದರ ಪಶ್ಚಿಮದ ಕಡೆಗೆ ನಿಮ್ಮ ಆಸ್ತಿ ಬರುತ್ತದೆ ಎಂದು ಸುಳ್ಳು ಹೇಳಿ, ಸುಳ್ಳು ಎದುರುಹಕ್ಕನ್ನು ಕೇಳುತ್ತಿದ್ದೀರಿ ಎಂದರೆ ಸರಿಯಲ್ಲ.

10. ನಿಡಿ-1 ನ್ನು ನಿಮ್ಮ ಕೇಸಿಗೆ ಅನುಕೂಲ ಆಗುವಂತೆ ಸೃಷ್ಟಿಸಿಕೊಂಡು ಬಂದಿದ್ದೀರಿ ಎಂದರೆ ಸರಿಯಲ್ಲ. ನಿಡಿ-1 ರಲ್ಲಿ ದಿನಾಂಕ, ತಿಂಗಳು, ವರ್ಷ ನಮೂದು ಆಗಿಲ್ಲ ಎಂದರೆ ಸಾಕ್ಷಿಯು ಸರ್ಕಾರದವರು ಕೊಟ್ಟ ಹಕ್ಕುಪತ್ರವನ್ನು ನಾನು ಪಡೆದಿರುತ್ತೇನೆ ಎನ್ನುತ್ತಾರೆ.

11. ನೀವು ನಿಮ್ಮ ಹೆಸರಿಗೆ 1992 ರಲ್ಲಿ ಹಕ್ಕು ಪತ್ರ ಕೊಟ್ಟಿದ್ದು ಎಂದು ಹೇಳಿದ್ದು, ಆದರೆ ನೀವು 2006-07 ನೇ ಸಾಲಿನ ಫಲಾನುಭವಿಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ಫಲಾನುಭವಿಗಳ ಪಟ್ಟಿ ಅಂಬೇಡ್ಕರ್ ಯೋಜನೆಯ ಅಡಿಯದ್ದಲ್ಲ, ಅದು ಆಶ್ರಯ ಯೋಜನೆಯ ಫಲಾನುಭವಿಗಳ ಪಟ್ಟಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಆಗಿದ್ದು ಅಂಬೇಡ್ಕರ್ ಯೋಜನೆಯ ಫಲಾನುಭವಿಗಳ ಪಟ್ಟಿ ಎನ್ನುತ್ತಾರೆ.

12. ನಿಡಿ-3 ಇಂದಿರಾ ಆವಾಸ್ ಯೋಜನೆಗೆ ಸಂಬಂಧಿಸಿದ್ದು ಎಂದರೆ ಸರಿ. 2010-11 ರಲ್ಲಿ ಬಸವ ಆವಾಸ್ ಯೋಜನೆಯಲ್ಲಿ ನಿಮ್ಮ ಹೆಸರಿನಲ್ಲಿ ಅಲಾಟ್ ಆಗಿಲ್ಲ, ನಿಮಗೆ ಸಂಬಂಧಿಸದೇ ಇರುವ ಫಲಾನುಭವಿಗಳ ಪಟ್ಟಿಯನ್ನು ಹಾಜರುಪಡಿಸಿ, ನ್ಯಾಯಾಲಯಕ್ಕೆ ಗೊಂದಲವುಂಟುಮಾಡುತ್ತಿದ್ದೀರಿ ಎಂದರೆ ಸರಿಯಲ್ಲ.

13. ಚರಂಡಿ ಜಾಗದಲ್ಲಿ ನೀವು ಕಬ್ಜ ಮಾಡಿಕೊಂಡಿದ್ದೀರೆಂದು ನಿಡಿ-5 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ.

14. 1992 ರಿಂದ 2022 ರವರೆಗೆ ನೀವು ಸತತವಾಗಿ ತೆರಿಗೆ ಕಟ್ಟುತ್ತಾ ಬಂದಿರುತ್ತೀರಿ ಎಂದರೆ ಸರಿ. ಸದರಿ ಆ ಎಲ್ಲಾ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಕಿರುತ್ತೇನೆ.

15. 2018-19 ರಲ್ಲಿ ನೀವು ಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೀರಿ ಎಂದರೆ ಸರಿ. ಅದರಲ್ಲಿ ನಿಮ್ಮ ಮನೆ ಸಂ.145 ಎಂದು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಅದರಲ್ಲಿ ಪೂರ್ವಕ್ಕೆ ಹುಸೇನಪ್ಪ ರವರ ಮನೆ, ಪಶ್ಚಿಮಕ್ಕೆ ಹಳ್ಳಪ್ಪ ರವರ ಮನೆ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ ಎಂದು ಬರೆಸಿದ್ದೀರಿ ಎಂದರೆ ಸರಿ.

16. ನೀವು ಮಾನ್ಯ ನ್ಯಾಯಾಲಯಕ್ಕೆ ನಿಮ್ಮ ಪ್ಲಾಟಿನ ಸಂ.54 ಎಂದು ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ. ಪಂಚಾಯಿತಿಯವರು ನೀಡಿದ ದಾಖಲೆಯಲ್ಲಿ ನಿಮ್ಮ ಪ್ಲಾಟ್ ನಂ.145 ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ.

17. 2019 ರಲ್ಲಿ ಗ್ರಾ.ಪಂ.ಹೆಡಗಿನಾಳ ರವರ ಉಳಿತಾಯ ಖಾತಾ ಸಂ.10964101034970 ಗೆ ನಿಮ್ಮ ಆಸ್ತಿ ನಂ.145 ಕ್ಕೆ ಸಂಬಂಧಿಸಿದಂತೆ ದಿ.11-01-2019 ಕ್ಕೆ ನೀವು ನಿಮ್ಮ ಹೆಸರಿನಲ್ಲಿ ರೂ.1,000/- ತೆರಿಗೆ ತುಂಬಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ. ಅದೇ ರೀತಿಯಾಗಿ 2019-20 ರಲ್ಲಿ ಪುನಃ ತೆರಿಗೆ ತುಂಬಿರುತ್ತೀರಿ ಎಂದರೆ ಸಾಕ್ಷಿಯು ಸುಳ್ಳು ಎನ್ನುತ್ತಾರೆ. ಅಂದರೆ ನೀವು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳು ಸುಳ್ಳು ಎಂದರೆ ಸಾಕ್ಷಿಯು ನಾನು ಪ್ಲಾಟ್ ನಂ.54 ಕ್ಕೆ ಸಂಬಂಧಿಸಿದಂತೆ ತೆರಿಗೆ ಕಟ್ಟಿರುತ್ತೇನೆ ಎನ್ನುತ್ತಾರೆ.

18. ನೀವು ನಿಮ್ಮ ಪಕ್ಕ ಇರುವ ಸರ್ಕಾರಿ ಪ್ಲಾಟನ್ನು ಕಬ್ಜ ಮಾಡಿಕೊಂಡು, ಕಬಳಿಸಬೇಕೆಂಬ ದುರುದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**